

# ಸೂರ್ಯ ಮತ್ತು ನೀರು

■ ವೀಣಾ ಶಂಕರ್
ಕಲೆ: ಸಂತೋಷ್ ಸಸಿಹಿತ್ಲು

ಅನೇಕ ವರ್ಷಗಳ ಹಿಂದೆ ಸೂರ್ಯ ಮತ್ತು ನೀರು ಒಳ್ಳೆಯ ಸ್ನೇಹಿತರಾಗಿದ್ದರು. ಇಬ್ಬರೂ ಭೂಮಿಯ ಮೇಲೇ ವಾಸವಾಗಿದ್ದರಂತೆ. ಸೂರ್ಯ ಅನೇಕ ಬಾರಿ ನೀರಿನ ಮನೆಗೆ ಭೇಟಿ ಕೊಡುತ್ತಿದ್ದ. ಆದರೆ, ನೀರು ಮಾತ್ರ ಯಾವತ್ತೂ ಸೂರ್ಯನ ಮನೆಗೆ ಬರುತ್ತಿರಲಿಲ್ಲ. ಒಂದು ದಿನ ಸೂರ್ಯ ನೀರನ್ನು ಉದ್ದೇಶಿಸಿ ‘ಗೆಳೆಯಾ, ನೀನೇಕೆ ನನ್ನ ಮನೆಗೆ ಒಮ್ಮೆಯೂ ಬರುವುದಿಲ್ಲ?’ ಕೇಳಿಯೇ ಬಿಡುತ್ತಾನೆ. ಆಗ ನೀರು ‘ಸೂರ್ಯ ನಿನ್ನ ಮನೆ ತುಂಬಾ ಚಿಕ್ಕದು, ನಾನು ನನ್ನ ಕಡೆಯವರು ಬಂದರೆ ನಿಮಗೇ ಜಾಗ ಇರುವುದಿಲ್ಲ. ಹಾಗಾಗಿ ನಿಮಗೆ ಏಕೆ ತೊಂದರೆ ಎಂದು ಬರುವುದಿಲ್ಲ ಅಷ್ಟೆ. ಒಂದು ಪಕ್ಷ ನಾವು ಬರಬೇಕಾದರೆ ನಿನ್ನ ಮನೆ ತುಂಬ ದೊಡ್ಡದಿರಬೇಕು. ನಾನು ಮತ್ತು ನನ್ನವರಿಗೆ ಸಾಕಾಗುವಷ್ಟು ವಿಸ್ತಾರವಿರಬೇಕು’ ಎಂದು ಹೇಳಿತು. ‘ಓಹೋ, ಅದಕ್ಕೇನಂತೆ’ ಒಮ್ಮೆ ಎಲ್ಲ ಬನ್ನಿ ನಮಗೇನೂ ತೊಂದರೆ ಇಲ್ಲ ಎಂದು ಸೂರ್ಯ ಹೇಳಿ ತನ್ನ ಮನೆಗೆ ಹಿಂತಿರುಗಿದ.

ಮನೆಗೆ ಹಿಂತಿರುಗಿದ ಸೂರ್ಯ ತನಗಾಗಿ ಕಾಯುತ್ತಿದ್ದ ಮಡದಿ ಚಂದ್ರಳಿಗೆ ನಡೆದ ಎಲ್ಲ ವಿಷಯವನ್ನೂ ತಿಳಿಸುತ್ತಾನೆ. ಕೆಲ ದಿನಗಳಲ್ಲೇ ಸೂರ್ಯ ಚಂದ್ರ ಜೋಡಿಗಳು ದೊಡ್ಡ ಮನೆಯನ್ನು ಕಟ್ಟಿಯೇ ಬಿಡುತ್ತಾರೆ. ಒಮ್ಮೆ ನೀರಿನ ಬಳಗಕ್ಕೆ ಆತಿಥ್ಯ ಮಾಡಬೇಕು ಎಂದು ತಮ್ಮ ಮನೆಗೆ ಬರಲು ಆಹ್ವಾನಿಸುತ್ತಾರೆ.

ನಿಗದಿಯಂತೆ ಒಂದು ದಿನ ನೀರು ತನ್ನ ಪರಿವಾರದೊಂದಿಗೆ ಸೂರ್ಯ–ಚಂದ್ರ ದಂಪತಿ ಮನೆಗೆ ಆಗಮಿಸಿತು. ಬಂದವರಲ್ಲಿ ಒಬ್ಬ ಕೇಳಿದ ‘ನಾವು ಒಳಗಡೆ ಬಂದರೆ ತೊಂದರೆ ಇಲ್ಲ ತಾನೇ?’. ಅದಕ್ಕೆ ಸೂರ್ಯ ‘ಓಹೋ ಧಾರಾಳವಾಗಿ ಬನ್ನಿ, ನಿಮಗೆ ನಮ್ಮ ಮನೆಗೆ ಪ್ರೀತಿಯ ಸ್ವಾಗತ’ ಎನ್ನುತ್ತಾನೆ. ನೀರು ಮನೆಯ ಒಳಗೆ ಹರಿಯಿತು. ನೀರಿನ ಜೊತೆಗೆ ಮೀನುಗಳು, ಜಲಚರಗಳು ಒಳಕ್ಕೆ ಬಂದವು. ಮೊಣಕಾಲಿನವರೆಗೂ ನೀರು! ನೀರಿನ ಪರಿವಾರದವ ಮತ್ತೊಬ್ಬ ಮತ್ತೆ ಕೇಳಿದ ‘ಇನ್ನೂ ನೀರು ಒಳಕ್ಕೆ ಬಂದರೆ ತೊಂದರೆ ಇಲ್ಲ ತಾನೆ’. ಅದಕ್ಕೆ ಸೂರ್ಯ–ಚಂದ್ರರು ‘ಪರವಾಗಿಲ್ಲ ಬನ್ನಿ’ ಎಂದು ಹೇಳುತ್ತಾರೆ. ನೀರು ಒಳ ನುಗ್ಗುತ್ತಾ ತಲೆಯ ಮಟ್ಟಕ್ಕೆ ಏರಿತು. ನೀರಿನ ಕಡೆಯವರಲ್ಲಿ ಮತ್ತೊಬ್ಬರು ‘ಇನ್ನೂ ಕೆಲವರು ಬರಬಹುದಾ?’ ಎಂದು ಕೇಳುತ್ತಾರೆ. ‘ಆಗಲಿ’ ಎಂದೇ ದಂಪತಿ ಹೇಳುತ್ತಾರೆ. ಈ ಬಾರಿ ಇನ್ನಷ್ಟು ನೀರು ಒಳಕ್ಕೆ ಬಂದಂತೆ, ಮನೆಯೆಲ್ಲ ತುಂಬಿ ತುಳುಕಿ ಸೂರ್ಯ–ಚಂದ್ರರು ತಮಗೆ ಜಾಗವಿಲ್ಲದೆ ಮನೆಯ ಛಾವಣಿಯ ಮೇಲೆ ಹೋಗಿ ಕೂರುತ್ತಾರೆ.

ಆಗ ನೀರಿನ ಕಡೆಯುವನೊಬ್ಬ ‘ಮತ್ತೆ ಇನ್ನೂ ಬಂದರೆ ಕಷ್ಟವಾಗಬಹುದೇನೋ’ ಎಂದು ಹೇಳಿದ. ಸೂರ್ಯ–ಚಂದ್ರರು, ಹಾಗೇನಿಲ್ಲ. ಬರಲಿ, ನೀವು ಅತಿಥಿಗಳು ಎಂದು ಹೇಳುತ್ತಾರೆ. ಇದೀಗ ನೀರು ಮತ್ತೆ ಛಾವಣಿಯವರೆಗೂ ತಲುಪಿ ತುಂಬಿ ಹರಿಯತೊಡಗಿತು. ಆಗ ಸೂರ್ಯ ಚಂದ್ರರು ಬೇರೆ ವಿಧಿ ಇಲ್ಲದೆ ಆಕಾಶಕ್ಕೆ ಹೋಗಿ ಕೂರಬೇಕಾಯಿತು. ಅಂದಿನಿಂದ ಇಂದಿನವರೆಗೂ ಸೂರ್ಯ ಚಂದ್ರರು ಆಕಾಶದಲ್ಲಿ ವಾಸವಾಗಿದ್ದಾರೆ. ನೀರು ತನ್ನ ಪರಿವಾರದ ಜೊತೆ ಕೆಳಗೆ ಉಳಿಯಿತು.

ಸಂಗ್ರಹ: (ಆಫ್ರಿಕಾ ಜನಪದ ಕಥೆ)